ಎಸ್.ಜೆ.ಎಂ.ವಿದ್ಯಾಪೀಠ (ರಿ) ಚಿತ್ರದುರ್ಗ

**ಎಸ್.ಜೆ.ಎಂ.ವ್ಹಿ. ಬಿ.ಎ.ಜೆ.ಎಸ್.ಎಸ್.ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು**

ನ್ಯಾಕ್ 'ಎ' ಗ್ರೇಡ್ ಮಾನ್ಯತೆ ಪಡೆದ

---

ಸಂಖ್ಯೆ: ಎಸ್.ಜೆ.ಎಂ.ವ್ಹಿ/ /2017–18 ದಿನಾಂಕ: 19–08–2017

ಗೆ ಪ್ರಕಟಣೆಯ ಕೃಪೆಗಾಗಿ

ಸಂಪಾದಕರು/ವರದಿಗಾರರು,

____________________ ಕನ್ನಡ ದಿನಪತ್ರಿಕೆ

ರಾಣೇಬೆನ್ನೂರು–581 115

ಮಾನ್ಯರೆ,

*"ದೇಶದ ಭವಿಷ್ಯ ವರ್ಗಕೋಣೆಯಲ್ಲಿ ನಿರ್ಮಾಣ ಆಗುತ್ತದೆ"*

ದೇಶದ ಭವಿಷ್ಯ ಸಂಪತ್ತಿನಲ್ಲಿಲ್ಲ ಅದು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಇದೆ" ಎಂದು ಧಾರವಾಢ ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಜಂಟಿ ನಿರ್ದೇಶಕರಾದ ಪ್ರೊ. ಡಿ.ಎಂ. ನಿಡವಣಿ, ಇವರು ದಿನಾಂಕ: 19–08–2017 ರಂದು ಸ್ಥಳೀಯ ಎಸ್.ಜೆ.ಎಂ.ವ್ಹಿ. ಬಿ.ಎ.ಜೆ.ಎಸ್.ಎಸ್. ಮಹಿಳಾ ಮಹಾವಿದ್ಯಾಲಯದ 2017–18ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಒಕ್ಕೂಟ ಹಾಗೂ ಎನ್.ಎಸ್.ಎಸ್. ಚಟುವಟಿಕೆಗಳನ್ನು ಉದ್ಘಾಟಿಸಿ " ವಿದ್ಯಾರ್ಥಿಗಳು ಸರ್ವತೋಮುಖ ಅಭಿವೃದ್ಧಿ ಹೊಂದುವಲ್ಲಿ ಪ್ರಯತ್ನಿಸಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಮಾತ್ರ ಸರ್ವತೋಮುಖ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ನುಡಿದರು. ವಿದ್ಯಾರ್ಥಿನಿಯರು ಉನ್ನತ ಕಾರ್ಯವನ್ನು ಸಾಧಿಸುವ ಗುರಿಯನ್ನು ಇಟ್ಟುಕೊಂಡು ಆತ್ಮವಿಶ್ವಾಸದಿಂದ ಕಾರ್ಯಪ್ರವೃತ್ತರಾದಾಗ ಜೀವನದಲ್ಲಿ ಯಶಸ್ಸನ್ನು ಸಾಧಿಸಲು ಸಾಧ್ಯ. ಕೇವಲ ಯಶಸ್ವೀ ಆಗದೇ ಪರಿಣಾಮಕಾರಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ನಿಮ್ಮ ವ್ಯಕ್ತಿತ್ವ ಬೇರೆಯವರಿಗೆ ಮಾದರಿಯಾಗಬೇಕು. ಇತಿಹಾಸ ನಿರ್ಮಿಸಿದ ಸಾಕಷ್ಟು ಯಶಸ್ವಿ ಮಹಿಳೆಯರ ಉದಾಹರಣೆಗಳನ್ನು ನೀಡಿ ವಿದ್ಯಾರ್ಥಿನಿಯರೇ ಕೀಳರಿಮೆಯನ್ನು ತ್ಯಜಿಸಿ, ಧೈರ್ಯದಿಂದ ಮುನ್ನುಗ್ಗುವ ಮನೋಭಾವ ಬೆಳೆಸಿಕೊಂಡು ಸಾಧಕರಾಗಿ ಎಂದರು.

ಮುಖ್ಯ ಅತಿಥಿಗಳಾಗಿ ಧಾರವಾಡ ಎಸ್.ಜೆ.ಎಂ.ವ್ಹಿ. ಮಹಾಂತ ಮಹಾವಿದ್ಯಾಲಯದ ಪ್ರಾಂಶುಪಾಲರೂ ರಾಜ್ಯ ಕಾಲೇಜು ಶಿಕ್ಷಕರ ಸಂಘದ ಅಧ್ಯಕ್ಷರಾದ ಡಾ.ಎನ್.ಬಿ.ಸಂಗಾಪೂರ, ಅವರು ಈ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ ದಿನಗಳನ್ನು ನೆನಪಿಸಿಕೊಂಡು ಮಹಿಳೆ ಶಕ್ತಿಯ ಪ್ರತೀಕ. ಹಾಗಾಗಿ ಮಹಿಳೆ ಕಾರ್ಯೇಸು ದಾಸೆ, ಕರುಣೇಸು ಮಂತ್ರಿ, ರೂಪೇಸು ಲಕ್ಷ್ಮಿ, ಎಂಬ ಮಾತನ್ನು ತಿಳಿಸುತ್ತ ವಿದ್ಯಾರ್ಥಿನಿಯರು ಹುಟ್ಟಿದ ಮನೆಗೂ, ಕೊಟ್ಟ ಮನೆಗೂ ಕೀರ್ತಿ ತರುವಂತವರಾಗಬೇಕು. ಇಂದಿನ ದಿನಮಾನಗಳಲ್ಲಿ ಮಹಿಳೆ ಎಲ್ಲ ರಂಗಗಳಲ್ಲಿಯೂ ಪಾಲ್ಗೊಂಡಿದ್ದಾಳೆ. ಈಗ ಮಹಿಳೆಯನ್ನು ಪುರುಷರಿಗೆ ಸಮಾನವಾಗಿ ಕಾಣುವ ಸಂದರ್ಭ ಒದಗಿ ಬಂದಿದೆ. ಈ ಮಹಾವಿದ್ಯಾಲಯದಲ್ಲಿ ಅಭ್ಯಸಿಸುವ ವಿದ್ಯಾರ್ಥಿನಿಯರು ರಾಷ್ಟ್ರಮಟ್ಟದಲ್ಲಿ ಹೆಸರು ತರುವಂತಹ ಗುರಿಯನ್ನು ಹೊಂದಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಚಿತ್ರದುರ್ಗದ ಎಸ್.ಜೆ.ಎಂ.ವಿದ್ಯಾಪೀಠದ ನಿರ್ದೇಶಕರು ಸ್ಥಳೀಯ ಗಣ್ಯ ಉದ್ದಿಮೆದಾರರಾದ ' ಶ್ರೀ ಬಿ.ಎನ್.ಪಾಟೀಲರವರು ವಿದ್ಯಾರ್ಥಿನಿಯರು ಕಾಲೇಜಿನಲ್ಲಿ ದೊರೆಯುವ ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ಶೈಕ್ಷಣಿಕ ಅಭಿವೃದ್ಧಿಯನ್ನು ಹೊಂದಬೇಕು, ವಿದ್ಯಾರ್ಥಿನಿಯರ ಶ್ರೇಯಸ್ಸಿಗಾಗಿ ಆಡಳಿತ ಮಂಡಳಿಯವರು ಎಲ್ಲ ಸಹಕಾರವನ್ನು ನೀಡಲು ಸಿದ್ಧವಿದೆ ಎಂದು ಹೇಳಿದರು.

ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದ ಕು.ಸಬೀನಾ ಬಾನು ಮುಲ್ಲಾ, ಮತ್ತು ಕು.ನೀಲಮ್ಮ ಬ್ಯಾಡಗೇರ, ಇವರಿಗೆ ನಿವೃತ್ತ ಶಿಕ್ಷಕರಾದ ಶ್ರೀ ಎಸ್.ಜಿ.ಹಿರೇಮಠ, ಇವರ ತಾಯಿಯ ಸ್ಮರಣಾರ್ಥ ದತ್ತಿ ನಿಧಿಯಿಂದ ಪ್ರತಿಭಾ ಪುರಸ್ಕಾರವನ್ನು ನೀಡಲಾಯಿತು.

ಪ್ರಾಚಾರ್ಯರಾದ ಪ್ರೊ.ಎಸ್.ಎಂ.ಜಿಡ್ಡಿಯವರು ಸ್ವಾಗತಿಸಿದರು, ವಿದ್ಯಾರ್ಥಿ ಒಕ್ಕೂಟದ ಛೇರಮನ್ನರಾದ ಡಾ.ಎಲ್.ಈಶ್ವರಪ್ಪನವರು ಒಕ್ಕೂಟದ ನೂತನ ಪದಾಧಿಕಾರಿಗಳನ್ನು ಪರಿಚಯಿಸಿದರು. ಕಾರ್ಯದರ್ಶಿ ಮಧು ಹಂಚಾಟೆ ಕಾರ್ಯಕ್ರಮ ನಿರೂಪಿಸಿದರು. ಸಹಕಾರ್ಯದರ್ಶಿ ಕು. ವೀಣಾ ರಡ್ಡೇರ ವಂದಿಸಿದರು. ಕಾಲೇಜಿನ ಸಮಸ್ತ ಸಿಬ್ಬಂದಿ ವರ್ಗದವರು ಹಾಜರಿದ್ದರು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಪ್ರಾಚಾರ್ಯರು

ಎಸ್.ಜೆ.ಎಂ.ವ್ಹಿ. ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು